Regd No M 1299 34 th Year ತಾ॥ 8—1—51

ಸತ್ಯವಾದಿ ಸೋಮವಾರ ಸಂಚಿಕೆ
ಶ್ರೀ ದ್ವಾರಕಾ ಜಗದ್ಗುರುಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುವ
ಪ್ರ ಬೋ ಧ
ಧಾರ್ಮಿಕ ಸಪ್ತಾಹಿಕವನ್ನೊಳಗೊಂಡಿದೆ
ವಾರ್ಷಿಕ ಚಂದಾ
ಅಂಚೆವೆಚ್ಚ ಸಮೇತ 1—14—0

ಸತ್ಯವಾದಿ
SATYAVADI

ಸ್ಥಾಪಕರು- ಅರಮನೆ ಸಿರಸ್ತೆದಾರ್ ಎ೦. ವಿ. ಸುಬ್ರಾಯರು [ಬಿಡಿ ಪ್ರತಿ 3 ಪೈ

ಗೋ ರ ಕ್ಷ ಣ
[ತಿಂಗಳಿಗೊಂದಾವರ್ತಿ]
ವಾರ್ಷಿಕಚಂದಾ ಅಂಚೆವೆಚ್ಚಸೇರಿ 8 ಆಣೆ

Protect the Cow
ಗೋರಕ್ಷಣೆ ನಡೆಯಲಿ

ಪ್ರಧಾನಿ ಪಂ॥ ನೆಹರು ಮೊನ್ನೆ ಬ್ರಿಟಿಷ್ ವಿದೇಶ ಮಂತ್ರಿ ಬೇವಿರೊಡನೆ ಕಲೆತಿದ್ದರು. ಕಾಶ್ಮೀರ ಕುರಿತು ಚರ್ಚೆಯಾದ ವಾರ್ತೆ ಇದೆ.

ಯೂರೋಪ್‌ನ ನಾನಾ ರಾಜ್ಯಗಳಲ್ಲಿರುವ ಭಾರತ ರಾಯಭಾರಿಗಳು ಪಂ॥ ನೆಹರುವನ್ನು ಪೇರಿಸಿನಲ್ಲಿ ಕಾಣುವರು. 16 ನೇ ತಾ॥ ಪಂ॥ ನೆಹರು ಪೇರಿಸಿಗೆ ಆಗಮಿಸುವರು ಫ್ರೆಂಚ್ ಭಾರತ ಭವಿಷ್ಯ ಬಗ್ಗೆ ಪಂ॥ ನೆಹರು ಅಲ್ಲಿನ ಪ್ರಧಾನಿ ಮತ್ತು ವಿದೇಶ ಮಂತ್ರಿಗಳೊಡನೆ ಸಮಾಲೋಚಿಸುವರು.

ಭಾರತಕ್ಕೆ ನುಗ್ಗುವರು !

ಅಬ್ದುಲ್ಲಾ-ಇಬ್ರಾಹಿಂ ಮತಭೇದದಿಂದ ಆಜಾದ್ ಕಾಶ್ಮೀರ್ ಸೇನೆಗಳೆಲ್ಲ ಒಕ್ಕಾಸ್ತಾಗಿವೆ ಎಂದು ವದಂತಿಯಾಗಿದೆ. ಈ ಭಿನ್ನಾಭಿಪ್ರಾಯದಲ್ಲಿ ಪಾಕಿಸ್ತಾನ ಸೇನೆಯನ್ನು ಪಡಲಾಗಿದೆ. ರದ್ದು ಮಾಡಲ್ಪಟ್ಟ ಆಜಾದ್ ಕಾಶ್ಮೀರ್ ಸೇನಿಕರನ್ನು ಭಾರತ ವಶದಲ್ಲಿರುವ ಕಾಶ್ಮೀರಕ್ಕೆ ನುಗ್ಗಿಸಿ ಅರ್ಥಿಕ ಪರಿಸ್ಥಿತಿಹಾಗೂ ಕಾಶ್ಮೀರ ಘಟನಾ ಸಮಿತಿಗೆ ನಡೆಯುವ ಜುನಾವಣೆಗಳನ್ನು ಹದಗೆಡಿಸಲು ಪ್ರಯತ್ನಿಸಲಾಗುವುದೆಂದೂ ಶ್ರೀನಗರದಿಂದ ಸುದ್ದಿ ಹೊರಟಿದೆ.

ವಾರ್ತೆಗಳು

ಬೊಂಬಾಯಿ ಜನರಲ್ ಪೋಸ್ಟ್ ಆಫೀಸಿನಿಂದ 22 ಇನ್ಸೂರ್ ಮಾಡಲ್ಪಟ್ಟ ವಸ್ತುಗಳು ಕಳ್ಳತನ ಮಾಡಲ್ಪಟ್ಟಿವೆ

ಕಲ್ಕತ್ತದಲ್ಲಿ ವಿಜ್ಞಾನ ಕಾಂಗ್ರೆಸಿನ ಮುಂದಿನ ಅಧಿವೇಶನ ಸೇರುತ್ತದೆ.

ಪಶ್ಚಿಮ ಬಂಗಾಳದಲ್ಲಿ ಕಮ್ಯುನಿಸ್ಟ್ ಸ್ಥಾನಬದ್ಧರನ್ನು ಖುಲಾಸೆ ಮಾಡಲಾಗುತ್ತಿದೆ.

ನಾದಿಯ ಜಿಲ್ಲೆ ಮೇಲೆ ಪಾಕಿಸ್ತಾನಿ ಮಿಸ್ಲಿಮರು ಧಾಳಿ ನಡೆಸಿದ ವಾರ್ತೆ ಕಲ್ಕತ್ತೆಯಿಂದ ಬಂದಿದೆ.

ಮೈಸೂರು : ಡಾ॥ ಬಿ. ಎಸ್. ಸೂರ್ಯನಾರಾಯಣರಾವ್‌ರ ಸತ್ಯಾಗ್ರಹ ಮುಂದುವರಿಯುತ್ತಿದೆ ಎಕ್ಸಾಟ್ಸರ್ಡಿನರಿ ಜನರಲ್ ಬಾಡಿ ಎಲೆಟಿಂಗನ್ನು ಕರೆಯಬೇಕೆಂದು ಬ್ಯಾಂಕಿನವರಿಗೆ ಸುಮಾರು 150 ಮಂದಿ ರುಜು ಮಾಡಿದ ಅರ್ಜಿ ಕೊಡಲಾಗಿದೆಯೆಂದು ತಿಳಿದುಬಂದಿದೆ. ಸಹಕಾರ ಇಲಾಖಾ ಸಚಿವ ಸಹಕಾರ ರಿಜಿಸ್ಟ್ರಾರ್ ಗವುನ ಈ ಸಮಸ್ಯೆ ಪರಿಹಾರಂದ ಕಡೆ ತಿರುಗಿದೆಯೆಂದು ಹೇಳಲಾಗಿದೆ. ಇದು ಕೊನೆಗಾಣಲು ಕೆಲವುದಿನ ಸತದ ಪ್ರಯತ್ನಿಸುತ್ತಿರುವರೆಂದು ಹೇಳಲಾಗಿದೆ. ಪೋಲೀಸ್ ಅಧಿಕಾರಿಗಳು ಒಂದು ನೋಡಿ ಹೋಗುತ್ತಿದ್ದು ರಕ್ಷಣೆಗಾಗಿ ಕಾನ್ಸ್ಟೆಬಲ್‌ನ ಇಟ್ಟಿದ್ದಾರೆ

ಪಂ॥ ನೆಹರುವನ್ನು ಚಾರ್ಜ್ ಆರ್ ಸನು ಒಕಿಂಗ್‌ಹ್ಯಾಂ ಅರಮನೆಗೆ ಸ್ವಾಗತಿಸಿ ಸಂಭಾಷಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಶ್ರೀಟಿ ನರಸಿಂಹಾಚ್ಯಂಗಾರ್ಯರು ಚಾಮರಾಜ ಮೊಹಲ್ಲ ಪರೀಕ್ಷಣೆ ಮಾಡಿದರು.

ಶಿಕ್ಷಣ ಸಂಸ್ಥೆಗಳ ಗಾಂಧಿ ತತ್ವ ಬೋಧನೆ ಅಗತ್ಯವೆಂದು ಭಾರತ ರಾಷ್ಟ್ರಪತಿಗಳು ಅಂಬಾಲಾದಲ್ಲಿ ತಿಳಿಸಿರುವರು.

ಕಾನಕಾನಹಳ್ಳಿಯಲ್ಲಿ ಸಮಾವೇಶವಾಗಿದ್ದ ಎಂ ಪಿ ಸಿ ಸಿ ನಿನ್ನೆ ಮುಕ್ತಾಯವಾಯಿತು.

ಮೊನ್ನೆ ಶ್ರೀನಗರದಲ್ಲಾದ ಭೂಕಂಪದಿಂದ ಮನೆಗಳು ಕುಸಿದಿವೆ

ನಿನ್ನೆ ದಿವಸ ಹಿಂದೂಕುಷ್ ಪರ್ವತದ ಬಳಿ ಭೂಮಿ ನಡುಗಿತ್ತೆಂದು ವರದಿ.

ನೆಹ್ರು ಕ. ರಾಜ್ಯಗಳಿಗೆ

ಪಂ॥ ನೆಹರು ಸೀಕಿಂಗ್ ಮತ್ತು ಮಾಸ್ಕೋವಿಗೆ ಸಂದರ್ಶನ ಕೊಡುವ ವಾರ್ತೆ ಇದೆ.

ಇದೇ ತಾ॥ 12 ರಲ್ಲಿ ಬೆಂಗಳೂರು ಕಾರ್ಪೊರೇಷನ್ನಿನ ಮೇಯರ್ ಮತ್ತು ಉಪ ಮೇಯರರ ಜುನಾವಣೆ ಜರುಗಲಿದೆ

ಕಳೆದ ವರ್ಷ ಅಹುರ ಧಾನ್ಯ ಕೊಳ್ಳುವ ಬಾಬತಿನಿಂದ ಮೈಸೂರು ಸರ್ಕಾರಕ್ಕೆ ಒಂದೂಕಾಲು ಕೋಟಿ ರೂ ನಷ್ಟವಾಗಿದೆ

ಲಕ್ನೋದಲ್ಲಿ 6 ಸಾವಿರ ಟಾಂಗಾವಾಲಗಳು ಹುರುಳಿ ಸರಬರಾಜಾಗಬೇಕೆಂದು ಮುಷ್ಕರ ಆರಂಭಿಸಿರುವರು

ಭಾರತ ಸರಕಾರ ಒರೋಡ ರಾಜರಿಗೆ ಎಚ್ಚರಿಕೆಯಿತ್ತು ವೈಯುಕ್ತಿಕ ಸ್ವಾರ್ಥಿ ಕಾಂಕ್ಷೆಯಿಂದ ಅಕ್ಕನಾತ ಖಂಡಿತವೆಂದು ಒರೋಡ ವಿಲೀನ ಕಾರಿತು ತಿಳಿಸಿದೆ.

ಶ್ರೀಗಳಾದ ಭಾಷ್ಯಂ ಚನ್ನಯ್ಯ ಕಂಚಸ್ಸ, ನಾರಾಯಣರಾವ್, ಸುಬ್ಬಹ್ಮಣ್ಯ ಇವರು ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಪ್ರತಿಸ್ಪರ್ಧಿಗಳಿಲ್ಲದೆ ಆರಿಸಲ್ಪಟ್ಟರು

ನಿನ್ನೆ ದಿವಸ ಕಾನಕಾನಹಳ್ಳಿಯಲ್ಲಿ ಸಮಾವೇಶವಾಗಿದ್ದ ಎಂ. ಪಿ. ಸಿ. ಸಿ. ಯಲ್ಲಿ 2 ನಿರ್ಣಯಗಳನ್ನು ಶಾಸನ ಸಭೆ ಕಾಂಗ್ರೆಸ್ ಪಕ್ಷಕ್ಕೆ ಸಂಬಂಧಪಟ್ಟಂತೆ ಮುಂಡಿಸಲ್ಪಟ್ಟಿದ್ದು ಬಹುಮತದಿಂದ ಚರ್ಚೆಯನ್ನು ತಿರಸ್ಕರಿಸಿತು. ಶ್ರೀ ಕುಮಾರಸ್ವಾಮಿಗಳು ಪೋಲ್ ಬೇಡಲು ಅಧ್ಯಕ್ಷರು ಅಗತ್ಯವಿಲ್ಲವೆಂದರು ಶ್ರೀಗಳಾದ ಕುಮಾರಸ್ವಾಮಿ ಮತ್ತು ನಾರಾಯಣಸ್ವಾಮಿ ಸಭಾತ್ಯಾಗ ಮಾಡಿದರು.

ಕಾನಕಾನಹಳ್ಳಿಯಲ್ಲಿ ಸೇರಿದ್ದ ಮೈಸೂರು ಕಾಂಗ್ರೆಸ್ ಅಧಿಕೃತವಾಗಿ ಸಭೆ ಮುಂದೆ ಮಂಡಿಸಲ್ಪಟ್ಟಿದ್ದ 8 ಆಣೆ ರುಪಾಯಿನ ಮೂಲ ತಿದ್ದುಪಡಿಯನ್ನು ಅಂಗೀಕರಿಸಿತು.

ಬೆಂಗ್ಳೂರ್ ಕಾರ್ಪೊರೇಷನ್ನಲ್ಲಿ ಯುನೈಟೆಡ್ ಸಿವಿಕ್ ಪಕ್ಷ ಪ್ರಾರಂಭವಾಗಿದೆ

ಅಪೇರಾ ಜಯಪ್ರದ 2 ನೇ ವಾರ
ಶ್ರೀ ಕೃಷ್ಣನ ಮನಸೆಳೆವ ಬಾಲಲೀಲೆಗಳು, ಕಂಸ ವಧೆ ಸಂಬಂಧದ ದೃಶ್ಯಗಳು
ಕಣ್ಮನಲಾಮಲಕವಾಗಿ ಪ್ರದರ್ಶಿಸುವ ಸೊಗಸಾದ ತಮಿಳು ಚಿತ್ರ
ಕೃಷ್ಣ ವಿಜಯ
ಪ್ರೇಮಾವತಿ, ನರಸಿಂಹ ಭಾರತಿ, ಲಲಿತ, ಪದ್ಮಿನಿ ಅಭಿನಯಿಸಿರುವರು
ಪ್ರತಿ ದಿನ 3 ಆಟಗಳು

ರಣಜಿತ್ ಯಶಸ್ವಿ 4 ನೇ ವಾರ
ನರ್ಗಂ Sargam
ಶಿಹನಾ — ರಾಜ ಕಪೂರ್ — ನಾರೋ — ಮುಮ್ತಾಜಲ್ಲಿ — ಓಂಪ್ರಕಾಶ್
ಅಧಿಸಯದಿಂದ ಕೂಡಿದ ಅತ್ಯಮೋಘ ಹಿಂದಿ ಚಿತ್ರ
ಸಕಲರೂ ನೋಡಬೇಕಾದ ಚಿತ್ರ — ಪ್ರತಿ ದಿನ 3 ಪ್ರದರ್ಶನಗಳು
ಮುಂದಿನ ಏನೋದ— "ನಿರಾಲ" — ಪಾತ್ರ : ಮಧುಬಾಲ, ದೇವಾನಂದ



ಉಡ್‌ಲಾಂಡ್
ಶಿನಿ
5—1—51 ರಿಂದ
DILRUBA
ದಿಲ್‌ರೂಬ
ರೆಹನಾ — ಕಕ್ಕು — ಯಾಕೂಬ್
ದೇವಾನಂದ್ ಅಭಿನಯಿಸಿರುವ
ಮನಮೋಹನ ಹಿಂದಿ ಚಿತ್ರ
ಪ್ರತಿ ದಿನ 3 ಪ್ರದರ್ಶನಗಳು

Edited, Printed and Published by M. S. Krishna Rao, at the Satyavadi Press Chamrajpuram Mysore

ಸಂಪುಟ ೯ ಸಂಚಿಕೆ ೧೭ ॥ಶ್ರೀ॥ ತಾ॥ 8-1-1951

— ಪ್ರಬೋಧ —

ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ, ಮುಳುಬಾಗಿಲು,
ಶ್ರೀ ಚೈತನ್ಯಾನಂದ ಮಹಾಧೀಶ್ವರರವರ
ಶ್ರೀ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರ
ಉದಾರಾಶ್ರಯದಲ್ಲಿ ಪ್ರಕಟವಾಗುತ್ತಿರುವ
— ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ —
ಸಂಪಾದಕ; ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಕಾರ್ಯದರ್ಶಿ, ಮೈ. ದೇ. ವ. ಸ್ವ. ಸಂಘ

ಲೌಕಿಕ ಕಲ್ಯಾಣಕ್ಕಾಗಿ
ಲೌಕಿಕ ಸಾಧನಗಳ ಆಶ್ರಯ ಪಡೆಯುವುದು ಮೂರ್ಖತನ. ಪ್ರಕೃತಿಯ ಕೋಪದಿಂದ ವಿನಾಶವು ಅವಶ್ಯಂಭಾವಿ. ಧರ್ಮದ ಆಶ್ರಯವು ಪರಮಾವಶ್ಯಕ.

— ಪೂಜ್ಯ ಶ್ರೀ ಸ್ವಾಮಿಜೀ ಕರಪಾತ್ರಿಗಳವರ ಭಾಷಣ —

(ಮುಂದುವರಿದುದು)

ಯಾರು ಸಮಾಚಾರ ಪತ್ರ, ರೇಡಿಯೋ ಮುಂತಾದುವುಗಳ ಸಮಾಚಾರಗಳನ್ನು ಗಂಭೀರವಾಗಿ ಅಧ್ಯಯನ ಮಾಡಿರುವರೋ, ಅವರು ಹಿಟ್ಲರಿನಂತೆ ಶಕ್ತಿ ಸಂಗ್ರಹ ಮಾಡಿದವನೂ ವಿಜಯದ ಮೇಲೆ ವಿಜಯ ಗಳಿಸಿದವನೂ ಯಾರೂ ಆಗಿಲ್ಲವೆಂಬುದನ್ನು ಬಲ್ಲರು. ಆದರೆ ಪ್ರಕೃತಿ ವಿರೋಧದ ಕಾರಣ ಅವನಿಗೂ ಘೋರ ಪತನವಾಯಿತು. ಧಾರಕವು ಹಗಲು ರಾತ್ರಿ ಸಾಯುವ ಬದುಕುವ ಚಿಂತೆಯಲ್ಲಿರುತ್ತಿದ್ದಂದೂ ಇದಕ್ಕೆ ಈ ಲೋಕದ ಚಿಂತೆಯೇ ಇರುವುದಿಲ್ಲವೆಂದೂ ಜನರು ಹೇಳುತ್ತಾರೆ : ಆದರೆ ವಿಷಯವು ಹಾಗಿಲ್ಲ. ವಿದ್ಯೆ ಮತ್ತು ಅರ್ಥದ ಸಂಪಾದನೆಯನ್ನು ತನ್ನನ್ನು ಆಜ್ಞಾ-ಅನುಸಂಧಿಸಿದ ತಿಳಿದುಕೊಡು ಮಾಡಬೇಕೆಂದೂ ಶಾಸ್ತ್ರಗಳು ಹೇಳಿವೆ. ಪತಿದಿನ ಗಳಿಸುವುದೂ ಪತಿದಿನ ತಿನ್ನುವುದೂ ಇದೇನೂ ಒಳ್ಳೆಯ ಸ್ಥಿತಿಯಲ್ಲ. ಸ್ವಸ್ಥತೆಯ ಸುಖವು ಸ್ವಸ್ಥ ಪ್ರಾಣಿಗೆ ಅನುಭೂತವಾಗುವುದಿಲ್ಲ ; ಆದರೆ ಬೇಸರ ಬಿದ್ದಾಗ ಬೇಸರವು ನಿವೃತ್ತವಾದ ಮೇಲೆ ಅನುಭೂತವಾಗುತ್ತದೆ. ಆದುದರಿಂದ ರೋಗವನ್ನು ಹುಟ್ಟಿಸಿ ರೋಗನಿವೃತ್ತಿಯ ದ್ವಾರಾ ಸ್ವಸ್ಥತೆಯು ಆನಂದವನ್ನನುಭವಿಸುವುದು ಭಾರತೀಯ ಪದ್ಧತಿಯಲ್ಲ. ಆದರೆ ಭಾರತೀಯ ಪದ್ಧತಿಯಾದರೊ— ತಿರುಗಿ ಗಳಿಸಬೇಕಾಗಿ ಬರದಷ್ಟನ್ನು ಒಂದೇ ಸಾರಿಗೆ ಗಳಿಸುವುದಾಗಿದೆ. ಅರ್ಥದ ಗೌಣಪ್ರಯೋಜನವು ಭೋಗ, ಮುಖ್ಯ ಪ್ರಯೋಜನವು ಧರ್ಮ ; ಮತ್ತು ಧರ್ಮದ ಗೌಣಪ್ರಯೋಜನವು ಅರ್ಥ, ಹಾಗೆಯೇ ಮುಖ್ಯ ಫಲವು ಭಗವತ್ಪ್ರಾಪ್ತಿಯಾಗಿದೆ. ಇದೇರೀತಿ ಕಾಮದ ಅಂತಿಮ ತಾತ್ಪರ್ಯವೂ ಭಗವತ್ಪ್ರಾಪ್ತಿಯಾಗಿದೆ. ಭಗವಲ್ಲೀಲೆಯು ಹಿಂತಸೆಯು ಧರ್ಮರೋಗದ ಔಷಧವಾಗಿದ್ದು ಅತ್ಯಂತ ಪವಿತ್ರವಾಗಿದೆ. ತಂದೆಯೂ ಗುರುವೂ ಮಗನನ್ನೂ ಶಿಷ್ಯನನ್ನೂ ಪವಿತ್ರರನ್ನಾಗಿ ಮಾಡಲಾರರು. ಕೇವಲ ಮಾತೆಯೇ ಪುತ್ರನನ್ನು ಯೋಗ್ಯನನ್ನಾಗಿಯೂ ಪವಿತ್ರನನ್ನಾಗಿಯೂ ಮಾಡಬಲ್ಲಳು. ಸ್ತ್ರೀಯರಿಗೆ ಪುರುಷರ ಸರಸಮಾನವಾದ ದರ್ಜೆಯನ್ನು ಕೊಡುವುದು ಅವರಿಗೆ ಅಪಮಾನ ಮಾಡುವುದಾಗಿದೆ. ಪತನಕ್ಕೆಳೆಯುವುದಾಗಿದೆ. ತಂದೆ ಸಿಂಹ ಸಹಸ್ರವಿಡಿ ದೊಡ್ಡ ದರ್ಜೆಯು ಮಾತೆಯದೆಂದು ಮನು ಹೇಳಿರುವನು. ಭಾರತದಲ್ಲಿ ೧೬-೧೭ ಕೋಟಿ ಪುರುಷರು ಕತ್ತಿಕೋವಿಗಳನ್ನು ಪ್ರಯೋಗಿಸಿ ಯಾವುದೇ ಜನ ತಾತ್ಪರಪೂರ್ಣ ಕಾರ್ಯವನ್ನು ಮಾಡಿಲ್ಲವಾದರೆ ಎಂಡು, ನಾಲ್ಕು ಕೋಟಿ ಸ್ತ್ರೀಯರೇ ಕೋವಿ ಪ್ರಯೋಗಿಸಿ ಏನು ಮಾಡಿಯಾರು ? ಅವರಿಂದಲೂ ಮನೆಯ ಪಾಳಿಯ ಜಗಳವೆಯಿದ್ದಕೊಂಡು ಒಬ್ಬ ಹರಿಶ್ಚಂದ್ರ, ರಾಮಚಂದ್ರರಂತಹ ಪುತ್ರನನ್ನು ಹುಟ್ಟಿಸಿದಲ್ಲಿ ದೇಶದ ಮುಖವನ್ನೆ ಉಜ್ವಲಗೊಳಿಸಬಲ್ಲರು. ಇದು ಶಾಸ್ತ್ರಗಳ ಸಿದ್ಧಾಂತವಾಗಿದೆ ಒಂದುವೇಳೆ ಬುದ್ಧಿಯು ಶಾಸ್ತ್ರಾಸುಶಾಣಿಯಾದರೆ ಅದರಿಂದಲೇ ನಾಶೆಯರು ಪತಿವ್ರತೆಯಾಗುವರು ಧರ್ಮದಿಂದ ಮೋಕ್ಷವೂ ಅಧರ್ಮದ ನಿವೃತ್ತಿಯೂ ಆಗುವವು. ದೇಶ ಮತ್ತು ವಿಶ್ವಕ್ಕೆ ಕಲ್ಯಾಣವಾಗುವುದು.

.... ಸದ್ಗುರು ವಾಣಿ ....

(ಸಂಪಾದಕ— ' ಗುರುಭಕ್ತ ')

1. ' ದೇವರ ಕೃಪೆ ಯಾವಾಗಲೂ ಇರುತ್ತದೆ '

ಶಿಷ್ಯ— ಭಗವನ್ ದೇವರು ಭಕ್ತರ ಮೇಲೆ ಯಾವಾಗ ಕೃಪೆ ಮಾಡುವನು ?

ಗುರು— ವತ್ಸಾ ! ಶ್ರೀ ರಾಮಕೃಷ್ಣ ಪರಮಹಂಸರು ಹೇಳುವಂತೆ ದೇವರ ಕೃಪೆಯು ಸದಾಕಾಲವೂ ಅನುಕೂಲ ವಾಯುವಿನಂತೆ ಬೀಸುತ್ತಿರುತ್ತದೆ. ಮನುಷ್ಯನು ಅನುಕೂಲವಾಯುವಿರುವಾಗಲೇ ಭಗವತ್ಕೃಪೆಯ ನ್ನು ಸದುಪಯೋಗ ಪಡಿಸಿಕೊಳ್ಳಬೇಕು. ಕರ್ಮಗಳ ಹಾಯಿಪಟವನ್ನೇರಿಸಬೇಕು. ಅರ್ಥಾತ್ ಪುರುಷಾರ್ಥ ಮಾಡಬೇಕು. ಆಗಲೇ ಭಗವತ್ಕೃಪೆಯು ಚೆನ್ನಾಗಿ ದೊರೆದು ಒಳ್ಳಿದು. ನೀನು ಒಂದು ಹೆಜ್ಜೆ ಮುಂದಿಟ್ಟೆಯಾದರೆ ಭಗವಂತನು ನಿನಗಾಗಿ ಹತ್ತು ಹೆಜ್ಜೆ ಬರುವನೆಂದು ತಿಳಿದು ಕೊ. ಇದ್ದರಿಂದ ಕೇವಲ ಪುರುಷಾರ್ಥವೇ ಅವಶ್ಯಕ, ಅತಿ ಪುರುಷಾರ್ಥ ಮಾಡು. ಈ ವಿಷಯವನ್ನೊಂದು ದೃಷ್ಟಾಂತದಿಂದ ತಿಳಿಸುವೆ, ಕೇಳು ಒಂದೂರಿನಲ್ಲಿ ನಾಲ್ಕು ವರ್ಷದ ಪುಟ್ಟ ನೊಬ್ಬನಿದ್ದನು. ಅವನ ತಾಯಿಯು ಅಂಗಳದಲ್ಲಿ ಅವನನ್ನು ಬಿಟ್ಟು, ಮನೆಗೆಲಸ ಮಾಡುತ್ತಿದ್ದಳು. ಬಾಲಕನು ಸ್ವಲ್ಪ ಹೊತ್ತು ಆಟವಾಡಿ, ತಾಯಿಯನ್ನು ಕಾಣದೆ ಅಮ್ಮಾ, ಅಮ್ಮಾ, ಎಂದು, ಕರೆಯುತ್ತಿದನು. ತಾಯಿಯು ತಿರುಗಿ ಬಾಲಕನು ಸ್ವರವು ಬಿದ್ದಿದ್ದನ್ನು ಕಾಣ್ಮವರೆಗಿಂದ ಅಕ್ಕ ಕಳಗೆ ಬಂದೆ ಮಗುವಿಗೆಯು ನೀನೆಲಿಂದಲೇ ' ಮಗೂ ! ನಾನು ಮನೆಲಿದ್ದೇನೆ, ನೀನು ಆಡು ' ಎಂದು ಹೇಳಿ, ಒಂದು ಆಟದ ಬೊಂಬೆಯನ್ನು ಎಸೆದಳು. ಮಗನು ಸ್ವಲ್ಪ ಸಮಯ ಸುಮ್ಮನಿದ್ದು, ಮತ್ತೂ ತಾಯಿಯು ಬರದಿದ್ದುದನ್ನು ನೋಡಿ ಮಗುವಿಗೆಯನ್ನೇರುವುದಕ್ಕಾಗಿ ಮೆಲ್ಲಮೆಲ್ಲನೆ ಏಣಿಯನ್ನು ಹತ್ತುವುದಕ್ಕೆ ತೊಡಗಿದನು ಬಾಲಕನು ಎರಡು ಮೂರು ಮೆಟ್ಟಲುಗಳನ್ನೇರಿಬಿಟ್ಟಾಗ ಮಾತೆಯ ದೃಷ್ಟಿಯು ಬಾಲಕನ ಮೇಲೆ ಬಿದ್ದಿತು ; ಹಾಗೂ ಪುತ್ರನು ಎರಡು ಮೂರು ಮೆಟ್ಟಲನ್ನೇರುತ್ತಲೇ ತಾಯಿಯು ಬೇಗಬೇಗ ಹತ್ತಿ ಹದಿನೈದು ಮೆಟ್ಟಲು ಕೆಳಗಿಳಿದು ಬಾಲಕನನ್ನೆತ್ತಿಕೊಂಡು ಮುಖವನ್ನು ಚುಂಬಿಸಿ ಮುದ್ದಾಡತೊಡಗಿದಳು

ವತ್ಸಾ ! ಇದು ನಾವು ನೋಡಿ ತಿಳಿದ ವಿಷಯ. ಇದೇ ಪ್ರಕಾರ ದಯಾಳುವಾದ ದೇವರೂ ನನಗಾಗಿ ಮಾಡುತ್ತಾನೆ, ' ದೇವರೇ ! ನನಗೆ ದರ್ಶನ ಕೊಡು ' ಎಂದು ನಾವು ದೇವರನ್ನು ಪ್ರಾರ್ಥಿಸುತ್ತಿರುವಾಗ ದೇವರೂ ಕೂಡ ಮನಸ್ಸಿನಲ್ಲಿಯೇ ' ಮಗೂ ! ಚಿಂತೆ ಮಾಡಬೇಡ, ಅವಶ್ಯವಾಗಿ ದರ್ಶನ ಕೊಡುವೆನು ಎಂದು ಹೇಳುತ್ತಿರುವನು ; ಆದರೆ ನಮ್ಮಂತಹ ದರ್ಶನ ಕೊಡಲಿಕ್ಕೆ ಇನ್ನೂ ಬಹಳ ವಿಳಂಬವಿರುತ್ತದೆ. ಪುನಃ ಯಾವಾಗ ನಾವು ಮತ್ತೂ ವ್ಯಾಕುಲರಾಗಿ ದೇವರಿಗಾಗಿ ಅಳುವೆವೋ, ಆಗ ನಮ್ಮನ್ನು ಮರೆಯಿಸುವುದಕ್ಕಾಗಿ ಹಣ, ಹೆಂಡತಿ, ಮಕ್ಕಳು ಮುಂತಾದ ಯಾವುದಾದರೂ ಆಟದ ಬಡನಿಗಳನ್ನು ಕೊಟ್ಟು ಬಿಡುತ್ತಾನೆ ; ಆದರೆ ಅದರಿಂದಲೂ ನಾವು ತೃಪ್ತರಾಗದೆ ಇನ್ನೂ ಹೆಚ್ಚಿಗೆ ವ್ಯಾಕುಲರಾಗಿ ನಮ್ಮನವ ಶಕ್ತಿಯ ನ್ನನುಸರಿಸಿ ಧ್ಯಾನ, ಜಪ, ನಾಮ, ಕೀರ್ತನೆ ಮುಂತಾದ ಭಕ್ತಿಯ ಮೂಲಕ ನಾಲ್ಕು ಮೆಟ್ಟಲುಗಳನ್ನು ಹತ್ತಿದ್ದಾದರೆ ಆಗ ದೇವರ ದೃಷ್ಟಿಯು ನಮ್ಮ ಮೇಲೆ ಬೀಳುತ್ತದೆ ಹಾಗೂ ಎಲ್ಲ ಮೆಟ್ಟಲುಗಳನ್ನು ಹತ್ತಿದೇನೆಯೋ ದೇವರು ಒಂದು ನಮ್ಮನ್ನು ಮೇಲೆತ್ತಿಕೊಂಡು ಮನಸ್ಸಿನ ಅಭಿಲಾಷೆಯನ್ನು ನೆರವೇರಿಸಿಕೊಡುವನು. ಏಕೆಂದರೆ ದೇವರು ತಾಯಿಯಂತೆ, ನನ್ನ ಪ್ರಯತ್ನವೆಲ್ಲವೂ ವಿಫಲವಾಗಿ ಬಿದ್ದು ಕೈಕಾಲುಗಳನ್ನು ಮುರಿದುಕೊಂಡಾನೆಂದು ಹೆದರುತ್ತಾನೆ ; ಅಹಾ ! ಇಂತಹ ದಯೆಯು ಇನ್ನಾರಿಗಿದೆ ? ಅದಕ್ಕಾಗಿಯೆ ವತ್ಸಾ ! ನೀನು ಪುರುಷಾರ್ಥವನ್ನೆಸಗಿ ವ್ಯಾಕುಲನಾಗಿ ಸಾಧನಸಿಖರಕ್ಕೇರಿಬಿಡುತ್ತೀಯೋ ಇರು ; ದೇವರು ನಿನಗೆ ನಿಶ್ಚಯವಾಗಿಯೂ ದರ್ಶನ ಕೊಡುವನು.

ಶ್ರೀ ದ್ವಾರಕಾ ಜಗದ್ಗುರುಗಳವರು [ಸ್ವಂ. ಹು. ತಂತಿ]

ಬಾಪ್ಟ್, ಜ 1 : ಅಹಮದಾಬಾದಿನಲ್ಲಿದ್ದಾಗ ಶ್ರೀ ದ್ವಾರಕಾ ಶಾರದಾ ಪೀಠದ ಜಗದ್ಗುರು ಶ್ರೀ ಶಂಕರಾಚಾರ್ಯಮಹಾಸ್ವಾಮಿಗಳು ಶಾಮಲಾಜ್ಯ ಪಾರ್ಲಿಮೆಂಟಿನ ಉದ್ಘಾಟನೆಯನ್ನು ನೆರವೇರಿಸಿ, ಶಾರದಾ ಪೀಠ ಸಂಸ್ಕೃತ ವಿದ್ಯಾಲಯ ಮತ್ತು ಗೋರಕ್ಷಣ ಸಭೆಗಳಮತ್ತು ಇತರ ಹಲವಾರು ಸಮಾರಂಭಗಳ ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಪುರಾತನ ಧರ್ಮ ಮತ್ತು ಸಂಸ್ಕೃತಿಯನ್ನುರಕ್ಷಿಸಿಬೆಂದು ಎಲ್ಲ ತಾಡೆಗಳಲ್ಲೂ ಬೋಧಿಸಿದರು. ಬಾಪ್ಟ್ಗೆ ನಿಷ್ಠೆ ಆಗಮಿಸಿದಾಗ ವೈಧವತಾಗಿ ಸ್ವಾಗತಿಸಲ್ಪಟ್ಟರು. ದಿನಪೂರ್ತಿ ಕಾರ್ಯಕ್ರಮಗಳು ನಡೆಯುತ್ತಿವೆ